ಒದಗಿಸಿಕೊಳ್ಳುವುದಾದರೆ ಏನು ಒಂದು ಹೊಸ ಲಿಬರೈಸೇಷನ್ ವ್ಯಾಪ್ತಿಯಲ್ಲಿ ಈಗ ಪ್ರೈವೇಟ್ ಕ್ಯಾಪಿಟಲಿಸ್ಟ್ಸ್ ಮುಂದೆ ಬರತಕ್ಕಥ ಸಾಧ್ಯತೇ ಇದೆಯೋ ಆ ಒಂದು ಅವಕಾಶವನ್ನು ಏಕೆ ನಾವು ಉಪಯೋಗಿಸಿಕೊಳ್ಳಬಾರದು ಎನ್ನತಕ್ಕಂಥ ಈ ಎರಡೂ ಪ್ರಪೋಸಲ್‌ಗಳು ಕ್ಯಾಬಿನೆಟ್ ಮುಂದೆ ಬಂದಿದೆ. ಇದರ ಬಗ್ಗೆ ಅಂತಿಮ ನಿರ್ಧಾರವನ್ನು ಶೀಘ್ರವಾಗಿ ಸರ್ಕಾರ ತೆಗೆದುಕೊಳ್ಳತ್ತದೆ.

ಭದ್ರಾ ಮೇಲ್ದಂಡೆ ಯೋಜನೆಯಿಂದ ಚಿತ್ರದುರ್ಗ, ತುಮಕೂರು ಜಿಲ್ಲೆಗಳಿಗೆ ನೀರು ಸರಬರಾಜು.

916 - ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಮೇಲ್ದಂಡೆ ಯೋಜನೆಯಿಂದ ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಿಗೆ ವ್ಯವಸಾಯಕ್ಕಾಗಿ ನೀರು ಸರಬರಾಜು ಮಾಡುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿರುವುದೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾಕದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಮತ್ತು ಆ) ಈ ಪ್ರಸ್ತಾವನೆಯು ಇನ್ನೂ ಪರಿಶೀಲನೆಯಲ್ಲಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರವಿದೆ. ಹಾಗಿದ್ದಲ್ಲಿ ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರವಿಲ್ಲ. ನನ್ನ ಪ್ರಶ್ನೆ, ಮೂರು ಜಿಲ್ಲೆಗಳಲ್ಲಿ ಮುಖ್ಯವಾಗಿ ಕೋಲಾರದ ಜಿಲ್ಲೆ ಬಹಳ ಬರಗಾಲದದ ಜಿಲ್ಲೆ. ಅಲ್ಲಿ ಯಾವುದೇ ನಾಲೆ ಇಲ್ಲ,, ನದಿಗಳಿಲ್ಲ. ನಮಗಿರತಕ್ಕಂಥದ್ದು ಒಂದೇ ಒಂದು ಅವಕಾಶ ಭದ್ರಾ ಮೇಲ್ದಂಡೆ ನೀರನ್ನು ವ್ಯವಸಾಯಕ್ಕೆ ಒದಗಿಸತಕ್ಕಂಥದ್ದು. ಅದರ ಬಗ್ಗೆ ಈ ಸರ್ಕಾರಥವರು ಗಂಭೀರವಾಗಿ ಈ ಯೋಜನೆಯನ್ನು ಪರಿಗಣಿಸಿ ತಕ್ಷಣ ನಮ್ಮ ಜಿಲ್ಲೆಗೆ ಸಹಾಯವಾಗುವ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸರ್ಕಾರ ಇನ್ನು ಅಂತಿಮವಾದ ತೀರ್ಮಾನಕ್ಕೆ ಬರುವುದಕ್ಕೆ ಆಗಿಲ್ಲ. ಹಲವಾರು ಪರ್ಯಾಯ ಪ್ರಸ್ತಾವನೆಗಳನ್ನು ಕೂಡ ಸರ್ಕಾರ ಆಲೋಚನೆ ಮಾಡುತ್ತಿದೆ. ಸುಮಾರು 80 ಕಿ.ಮೀ. ಡೆಡ್‌ಕೆನಾಲ್ ಬರುವುದರಿಂದ, ಯಾವುದೇ ರೀತಿ ಇದು ಉಪಯೋಗಕ್ಕೆ ಬರುವುದಿಲ್ಲ. ಇದೊಂದೇ ಅಲ್ಲ. ಮುಳುಗಡೆಯಾರತಕ್ಕಂಥಹ ಭೂಮಿ ಅತ್ಯಂತ ಬೆಲೆ ಬಾಳತಕ್ಕಂತಹ, ಕಾಫಿ, ಏಲಕ್ಕಿ, ಅರಣ್ಯದಿಂದ ಕೂಡಿದ್ದು, ಇದು ಸಾರ್ವಜನಿಕರಿಗೆ ಸೇರಿರತಕ್ಕಹತದ್ದು. ಇದರ ಜೊತೆಗೆ ಸರ್ಕಾರಿ ಭೂಮಿ ಕೂಡ ಮುಳುಗಡೆಯಾಗುತ್ತದೆ. ಪರಿಸರದ ಸಮಸ್ಯೆ ಕೂಡ ಇದೆ. ಈ ಯೋಜನೆಗೆ ಇಟ್ಟಿರತಕ್ಕಂತಹ ನೀರು 8 ಟಿ.ಎಂ.ಸಿ, ಅಲೋಕೇಷನ್ 21 ಟಿ.ಎಂ.ಸಿ. ಈ ನೀರಿನ ಹಂಚಿಕೆಯಲ್ಲಿ ಮೊದಲಿನಿಂದ ನಾವು ಒಂದು ನೀರಿನ ಯೋಜನೆಯನ್ನು ಮಾಡಿದ್ದೇವೆ. ಅದರಲ್ಲಿ ಭದ್ರಾಕ್ಕೆ 8 ಟಿ.ಎಂ.ಸಿ ಮಾತ್ರ ಇಟ್ಟಿದ್ದೇವೆ. ನಾನು ಮೊದಲೇ ಹೇಳಿದಂತೆ, ಬಹಳ ಬೆಲೆ ಬಾಳುವಂಥ ಭೂಮಿ ಮುಳುಗಡೆಯಾಗತಕ್ಕಂಥದ್ದು, 80 ಕಿ.ಮಿ. ಡೆಡ್‌ಕೆನಾಲ್ ಕೈಬಿಡತಕ್ಕಂತದ್ದು, ನಂತರ ಚಿತ್ರದುರ್ಗ, ತುಮಕೂರು ಮೊದಲಾದ ಕಡೆ ನೀರಿನ ವ್ಯವಸ್ಥೆಗೆ ಅನುಕೂಲವಾಗುತ್ತದೆ ಎನ್ನುವುದು ನಮ್ಮ ತಾಂತ್ರಿಕ ವರದಿ. ಈ ಹಿನ್ನೆಲೆಯಲ್ಲಿ ಇದರ ಬಗ್ಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಸರ್ಕಾರ ಹೊಸ ತಂತ್ರಜ್ಞಾನವನ್ನು ಅಳವಡಿಸಿ ಮುಳುಗಡೆಯಾರತಕ್ಕಂತಹ ಭೂಮಿಯನ್ನು ಕಡಮೆ ಮಾಡುವುದಕ್ಕೆ ಸಾಧ್ಯವೇ? 80 ಕಿ.ಮಿ. ಡೆಡ್ ಕೆನಾಲ್ ಏನಿದೆ ಅದಕ್ಕೆ ಬದಲಾಗಿ ಭದ್ರಾ ನೀರನ್ನು ಪ್ಲಷ್

ಸೀಸನ್‌ನಲ್ಲಿ ಲಿಫ್ಟ್ ಮಾಡಿ ಬೇರೆ ಕಡೆ ರಿಸರ್ವ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೆ? ಇವೆಲ್ಲವನ್ನೂ ಸ್ವಲ್ಪ ಮಟ್ಟಿಗೆ ತಾಂತ್ರಿಕವಾಗಿ ವಿಮರ್ಶೆ ಮಾಡಬೇಕಾಗಿದೆ. ಈ ಹಂತದಲ್ಲಿ ಕ್ರಮಕೈಗೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಜಿ.ವಿ ಶ್ರೀರಾಮರೆಡ್ಡಿ : ಇದರ ಬಗ್ಗೆ ತಕ್ಷಣ ಏನಾದರೂ ಕ್ರಮ ಕೈಗೊಂಡು ನಮ್ಮ ಕೋಲಾರ ಜಿಲ್ಲೆಯನ್ನು ಸಿಂಪತೆಟಿಕ್ಕಾಗಿ ಪರಿಗಣಿಸಬೇಕು. ಏಕೆಂದರೆ ನಮ್ಮ ಜಿಲ್ಲೆಯ ಸಮಸ್ಯೆ ನಿಮಗೆ ಗೊತ್ತಿದೆ. ಅದಕ್ಕೆ ದಯವಿಟ್ಟು ಅದಷ್ಟು ಬೇಗ ಸಿಂಪತೆಟಿಕ್ಕಾಗಿ ಪರಿಗಣಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಈ ಒಂದು ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ನಾನು ಈ ಸದನದಲ್ಲಿ ಇಲ್ಲದೆ ಇರತಕ್ಕಂತಹವರ ಹೆಸರನ್ನು ಹೇಳಿದರೆ ತಪ್ಪಾಗುವುದಿಲ್ಲವೆಂದು ನಿಮ್ಮ ಅನುಮತಿಯಿಂದ ಹೇಳುತ್ತಿದ್ದೇನೆ. ಶ್ರೀಮಾನ್ ಸಿದ್ಧವನಹಳ್ಳಿ ನಿಜಲಿಂಗಪ್ಪನವರು, ಆ ಜಿಲ್ಲೆಯ ಮುಖಂಡರುಗಳಾದ ಶ್ರೀಮಾನ್ ಜಾಫರ್ ಶರೀಫ್, ಕೃಷ್ಣರಾಯರು, ನಾನು ಆರು ವರ್ಷ ನೀರಾವರಿ ಮಂತ್ರಿಯಾಗಿದ್ದಂಥ ಕಾಲದಲ್ಲಿ ಸಾಕಷ್ಟು ಒತ್ತಡಗಳನ್ನು ತಂದರು. ನನ್ನ ಮುಂದೆಯೂ ಕೂಡ ಬಂತು. ಇತ್ತೀಚೆಗೆ ನಡೆದಿರುವುದು. ಅದರೆ ಆ ಸಂದರ್ಭದಲ್ಲಿ ಬಾಳೆ ಹುಂಡ್ರಿಯವರು ಸೇರಿ ಒಂದು ನಿರ್ಣಯ ಮಾಡಿ ಒಂದು ಎಷ್ಟಿಮೇಟನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆವು. ಯೋಜನಾ ಆಯೋಗದ ವರ್ಕಿಂಗ್ ಗ್ರೂಪ್‌ನವರು ಎಲ್ಲಾ ಹಳೆಯ ಪ್ರಾಜೆಕ್ಟ್‌ಗಳನ್ನು ಸೇರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು 6-8 ಪ್ರಾಜೆಕ್ಟ್‌ಗಳನ್ನು ವಾಪಸ್ ಕಳುಹಿಸಿದರು. ಅದರ ಬಗ್ಗೆ ಸಾಕಷ್ಟು ಜಟಿಲವಾದಂಥ ಪರಿಸರ ಸಮಸ್ಯೆ ಇದೆ, ಜೊತೆಗೆ ಆರ್ಥಿಕವಾಗಿ ಪೀಸಿಬಿಲಿಟಿ ಇದೆಯೇ ಎನ್ನವ ಬಗ್ಗಮೆ ಯೋಚನೆ ಮಾಡಲೇಕಾಗಿದೆ. ಇತ್ತೀಚೆಗೆ ನಾನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿದ್ದೇನೆ. ಅದೇನೆಂದರೆ 80 ಕಿ.ಮಿ. ಡೆಡ್ ಕೆನಾಲ್ ತೆಗೆಯುವುದಕ್ಕೆ ಬದಲಾಗಿ ನೀರನ್ನು ಲಿಫ್ಟ್ ಮಾಡಿ ಅಲ್ಲಿಂದ ಮುಂದಕ್ಕೆ ಮೈದಾನ ಪ್ರದೇಶದಲ್ಲಿ ಒಂದು ರಿಸರ್ವಾಯರ್ ಹಾಕಿ, ಅಲ್ಲಿ ಅರಣ್ಯ ಪ್ರದೇಶ. ಕಾಫಿ ತೋಟ, ಏಲಕ್ಕಿ ತೋಟ ಏನು ಮುಳುಗಡೆಯಾಗುತ್ತದೆ. ಆ ಮುಳುಗಡೆ ಪ್ರದೇಶವನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವೇ? ಹೀಗೆ ಪರ್ಯಾಯವಾಗಿ ಎಲ್ಲಾ ಯೋಚನೆ ಮಾಡಿ ಎಂದು ಸೂಚನೆ ಕೊಟ್ಟಿದ್ದೇನೆ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ

ಅನಗವಾಡಿಯ ಸೇತುವೆಗೆ ಬದಲೀ ಸೇತುವೆ.

508 - ಶ್ರೀ ಜೆ.ಟಿ. ಪಾಟೀಲ (ಬೀಳಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣ ಮೇಲ್ದಂಡೆ ಯೋಜನೆಯೂ ಮುಳುಗಡೆಯಾರಲಿರುವ ಅನಗವಾಡಿಯ ಸೇತುವೆ ಬದಲಿ ಸೇತುವೆ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭ ಮಾಡಲಾಗುತ್ತದೆ.

ಆ) ಈ ಯೋಜನೆಯ ರೂಪು ರೇಖೆಗಳೇನು? ಹಾಗು ಅಂದಾಜು ವೆಚ್ಚ ಎಷ್ಟು?

ಇ) ಯೋಜನೆಯ ಟೆಂಡರ್ ಕರೆದಿರುವುದು ನಿಜವೇ. ಹಾಗಿದ್ದಲ್ಲಿ ಟೆಂಡರ್ ಒಪ್ಪಿಗೆಯಾಗಿದೆಯೆ.

ಈ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ?

ಉ) 1966 ರಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ ಹಿನ್ನೀರು ಬಂದು ನಿಂತಮೇಲೆ ಈ ಸೇತುವೆ ಕಾಮಗಾರಿ ಪೂರ್ಣಗೊಳ್ಳಲು ಸಾಧ್ಯವಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :